ಶ್ರೀ ಪ್ರಭಾಕರ್ ರಾಣಿ.- ಒಬ್ಬ ಮಾಧ್ಯಮಿಕ ಶಾಲಾ ಶಿಕ್ಷಕರ ಮೇಲೆ ನೂರಾರು ಸುಳ್ಳು ಆರೋಪಗಳನ್ನು ಹೊರಿಸಿ ಕೇಸುಗಳನ್ನು ಹಾಕಿದ್ದಾರೆ. ಸಣ್ಣ ಪುಟ್ಟ ವ್ಯಾಪಾರಸ್ಥರ ಮೇಲೆ ಕೂಡ ಬಹಳಷ್ಟು ಅನ್ಯಾಯಗಳನ್ನು ನಡೆಸಿದ್ದಾನೆ. ಉತ್ತರ ಕನ್ನಡ ಜಿಲ್ಲೆಯ ಉನ್ನತ ಪೋಲೀಸ್ ಅಧಿಕಾರಿಗಳು ಇದರ ಬಗ್ಗೆ ವರದಿ ಕಳುಹಿಸಿದ್ದರೂ, ಇದುವರೆವಿಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಸರ್ಕಾರದವರು ಸೂಕ್ತ ಕ್ರಮವನ್ನು ಕೂಡಲೇ ತೆಗೆದುಕೊಳ್ಳದಿದ್ದರೆ ಜನತೆ ಸಹನೆ ಮೀರಿ ವಿಕೋಪಕ್ಕೆ ಹೋದರೆ ಸರ್ಕಾರವೇ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಇವನು ಮಾಡುವಂಥ ದುಷ್ಕೃತ್ಯಗಳನ್ನು ನೋಡಿದರೆ ಇವನು ನಕಲಿ ಪಿ. ಎಸ್. ಐ. ಇರಬಹುದೆಂದು ಅನುಮಾನ ಬರುತ್ತದೆ.

ಶ್ರೀ ಪ್ರಭಾಕರ್ ರಾಣಿ.—ಕೆಲವು ಕಡೆ ನಕಲಿ ಪಿ.ಎಸ್.ಐ.ಗಳು ಕೆಲಸ ಮಾಡುತ್ತಿದ್ದಾರೆ.

ಅಧ್ಯಕ್ಷರು.—ಮಾನ್ಯ ರಾಣಿಯವರೇ, ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಪ್ರಭಾಕರ್ ರಾಣಿ.—ಅಧ್ಯಕ್ಷರೆ, ಸರ್ಕಾರದವರು ಈ ವಿಷಯದಲ್ಲಿ ಕೂಡಲೇ ಕ್ರಮಕ್ಕೆಗೊಳ್ಳಬೇಕು. ಕ್ರಮ ಕೈಗೊಳ್ಳಲು ಏನಾದರೂ ಅಸಾಮರ್ಥ್ಯತೆ ಅಥವಾ ಯಾರಾದರೂ ಪ್ರಭಾವ ಬೀರುವವರು ಇದ್ದರೆ, ಪ್ರಭಾವಕ್ಕೆ ಒಳಗಾಗದೆ ಬೇರೊಬ್ಬ ಪಿ.ಎಸ್.ಐ. ಅನ್ನು ನೇಮಿಸುವ ವ್ಯವಸ್ಥೆ ಮಾಡಬೇಕು.

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಈ ಒಂದು ವಿಷಯವನ್ನು ಎತ್ತಿರತಕ್ಕಂತಹ ಮಾನ್ಯ ಸದಸ್ಯರ ಗಮನಕ್ಕೆ ಕೆಲವು ವಿಷಯಗಳನ್ನು ನಾನು ತರಲಿಚ್ಛಿಸುತ್ತೇನೆ. ಅವರು ಯಾವ ಅಧಿಕಾರಿ ಮೇಲೆ ಆರೋಪಣೆಯನ್ನು ಮಾಡಿದ್ದಾರೆ. ಅವರು ಡಿಫೆಂಡ್ ಮಾಡಿಕೊಳ್ಳಲು ಇಲ್ಲಿ ಇಲ್ಲ. ಸಿಇನೇ ನಿಯಮದಲ್ಲಿ ಪ್ರಶ್ನೆ ಇದೆ. ಈ ವಿಚಾರಗಳನ್ನು ನಾವು ಪರೀಕ್ಷಿಸದೆ ಈಗಲೇ ಉತ್ತರ ಕೊಡುವುದು ಕಷ್ಟವಾಗುತ್ತದೆ. ಅವರು ಹೇಳಿರತಕ್ಕಂತಹ ಆರೋಪಣೆಗಳು ಏನಿವೆ, ಅವು ಸಾಬೀತಾದರೆ ಆ ಅಧಿಕಾರಿಯನ್ನು ಶಿಕ್ಷೆಗೆ ಒಳಪಡಿಸುತ್ತೇವೆ. ಅವು ಸಾಬೀತಾಗದಿದ್ದರೆ ಮಾನ್ಯ ಸದಸ್ಯರು ಇನ್ನು ಮುಂದೆ ಇಂತಹ ವಿಷಯಗಳನ್ನು ಇಲ್ಲಿ ತರಬಾರದೆಂದು ಕೇಳಿಕೊಳ್ಳುತ್ತೇನೆ.

ಚಿಕ್ಕಮಗಳೂರಿನ ಹೋಟೆಲ್ ತಾಜ್ ಮಾಲೀಕರ ಮೇಲೆ ಅರಣ್ಯ ಸಿಬ್ಬಂದಿಯವರಿಂದ ಹಲ್ಲೆ

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೆ, ಚಿಕ್ಕಮಗಳೂರಿನ ಶ್ರೀ ಖಾಲಿ ಮೊಹಿದ್ದಿನ್ ಎಂಬವರು ಒಂದು ಹೋಟೆಲಿಗೆ ಡಿಪೋನಿಂದ ಕಟ್ಟಿಗೆಯನ್ನು ತರುವಾಗ ಅಲ್ಲಿನ ಶ್ರೀ ರಾಮಕೃಷ್ಣ ಎಂಬ ಫಾರೆಸ್ಟ್ ರೇಂಜ್ ಆಫೀಸರ್ ಮತ್ತು ಶ್ರೀ ಬರಸೇಗೌಡ ಶ್ರೀ ಚಂದ್ರಶೆಟ್ಟಿ, ಶ್ರೀ ಸುಬ್ಬುಶೆಟ್ಟಿ, ಎಂಬ ಫಾರೆಸ್ಟ್ ಗಾರ್ಡ್‌ಗಳೂ ಸೇರಿ, ಖಾಲಿ ಮೊಹಿದ್ದಿನ್ ಅವರ ಮಾವ ಮೊಹಮದ್ ಇಬ್ರಾಹಿಂ ಮತ್ತು ಹೋಟೆಲ್ ಕೆಲಸಗಾರರಾದ ಶ್ರೀ ದೇವದಾಸ್, ಶ್ರೀ ನಜೀರ್ ಹುಸೇನ್ ಅವರನ್ನು ಹೊಡೆದು ಬಡಿದು ಮಾಡಿದ್ದಾರೆ ಅವರು ಪೋಲೀಸ್‌ಗೆ ಕಂಪ್ಲೇಂಟ್ ಕೊಟ್ಟಿದ್ದಾರೆ. ಈಗ ಅರಣ್ಯದಲ್ಲಿ ಮರದ ಬೂಡ ಜಾಸ್ತಿಯಾಗುತ್ತಿದೆ. ಮರ ಬಹಳ ಕಡಿಮೆಯಾಗುತ್ತಿದೆ. ನಾನು ಅರಣ್ಯ ಅಧಿಕಾರಿಗಳಿಗೆ ಶಿಕ್ಷೆ ಕೊಡಿ ಎಂದು ಕೇಳುವುದಿಲ್ಲ. ಒಂದು ರೇಂಜಿನಲ್ಲಿ ಕಳೆದ ವರ್ಷ ಎಷ್ಟು ಮರ ಇತ್ತು ಈ ವರ್ಷ ಎಷ್ಟು ಮರ ಜಾಸ್ತಿಯಾಗಿದೆ. ಈ ವಿವರಗಳನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಬಿ. ಎ. ಜೀವಿಜಯ(ಮಾನ್ಯ ಅರಣ್ಯ ರಾಜ್ಯ ಸಚಿವರು).—ಅಧ್ಯಕ್ಷರೆ, ಚಿಕ್ಕಮಗಳೂರಿನ ವಿಭಾಗದಲ್ಲಿ ಅರಣ್ಯ ಅಧಿಕಾರಿಗಳು ಹೋಟೆಲ್ ಮಾಲೀಕರನ್ನು ಹೊಡೆದಿದ್ದಾರೆಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ಮತ್ತು ಮರಗಳನ್ನು ಕಡಿಯುತ್ತಿದ್ದಾರೆಂದು ಹೇಳಿದ್ದಾರೆ,

ಶ್ರೀ ಆರ್. ಎನ್. ನಾಯಕ್.—ಈಗಾಗಲೇ ಪೋಲೀಸ್ ಸ್ಟೇಷನ್‌ನಲ್ಲಿ ಕಂಪ್ಲೇಂಟ್ ಮಾಡಿದ್ದಾರೆ.

ಅಧ್ಯಕ್ಷರು.—ಅವರು ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ

ಶ್ರೀ ಬಿ. ಎ. ಜೀವಿಜಯ.—ಅಧ್ಯಕ್ಷರೆ, ನನ್ನ ಸ್ನೇಹಿತರಾದಂತಹ ಶ್ರೀ ನಾಯಕ್‌ರವರು ಚಿಕ್ಕ ಮಗಳೂರು ವಿಭಾಗ ಅರಣ್ಯ ಅಧಿಕಾರಿಗಳು ಮತ್ತು ಫಾರೆಸ್ಟ್ ಗಾರ್ಡ್‌ಗಳು, ಹೋಟೆಲ್ ಮಾಲೀಕರನ್ನು ಅಮಾನುಷವಾದ ರೀತಿಯಲ್ಲಿ ಹೊಡೆದಿದ್ದಾರೆಂದು ಹೇಳಿದ್ದಾರೆ. ಅಮಾನುಷವಾದ ರೀತಿಯಲ್ಲಿ ಅವರನ್ನು ಹೊಡೆದಿದ್ದಾರೆಯೋ ಅಥವಾ ಇಲಾಖೆಯವರನ್ನು ಅವರು ಚೆಚ್ಚಿದ್ದಾರೆಯೋ ಇದರ ಬಗ್ಗೆ ಪೂರ್ಣ ಮಾಹಿತಿಯನ್ನು ನಾಡಿದ್ದು ಅವರಿಗೆ ಕೊಡುತ್ತೇನೆ.

ಮೈಸೂರು ನಗರದಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ನಡೆಸುವುದು

ಶ್ರೀ ವೇದಾಂತ ಹೆಬ್ಬಿಗೆ–ಅಧ್ಯಕ್ಷರೆ,ಮೈಸೂರು ನಗರದಲ್ಲಿ ವಿಶ್ವಕನ್ನಡಸಮ್ಮೇಳನ ಯಾವಾಗನಡೆಯಲಿತ್ತೆದೆ. ಸಮ್ಮೇಳನದ ಸಭಾಂಗಣದ ನಿರ್ಮಾಣವಾಗಿದೆಯೇ ? ಇದುವರೆಗೆ ಆಗಿರುವ ವೆಚ್ಚ ಎಷ್ಟು ? ಯಾವಾಗ ಪೂರ್ಣ ಆಗುತ್ತದೆ ಮತ್ತು ಇದರ ಅಂಗವಾಗಿ ಕಟ್ಟಿರುವ ೧೦೦ ಅತಿಥಿ ಗೃಹಗಳ ಉಪಯೋಗ ಆಗುತ್ತಿದೆಯೇ ? ವಿಶ್ವ ಕನ್ನಡ ಸಮ್ಮೇಳನಕ್ಕೆ ಸರ್ಕಾರ ಅಂದಾಜು ಮಾಡಿರುವ ವೆಚ್ಚ ಎಷ್ಟು ? ಇದರ ಬಗ್ಗೆ ಸಂಪೂರ್ಣ ವಿವರ ಕೊಡಬೇಕು.

ಶ್ರೀ ಬಿ. ಎ. ಜೀವಿಜಯ.—ಅಧ್ಯಕ್ಷರೆ, ಈ ವಿಷಯವನ್ನು ಈಗತಾನೆ ಪ್ರಸ್ತಾಪ ಮಾನ್ಯಸದಸ್ಯರು ಮಾಡಿದ್ದಾರೆ. ವಿಶ್ವ ಕನ್ನಡ ಸಮ್ಮೇಳನ ನಡೆಯುವ ತಾರೀಖು ಇನ್ನೂ ನಿರ್ಧಾರವಾಗಿಲ್ಲ. ಸಭಾಂಗಣಕ್ಕೆ ಇದುವರೆಗೆ ಎಂದರೆ ೧೯೮೫ ನೇ ಫೆಬ್ರವರಿ ತಿಂಗಳ ಕೊನೆಯವರೆಗೆ ಆಗಿರುವಂಥದ್ದು ೧ ಕೋಟಿ ೪೧ ಲಕ್ಷದ ೭೦ ಸಾವಿರದ ೭೦೦ ರೂಪಾಯಿಗಳು ಅತಿಥಿ ಗೃಹಗಳ ಉಪಯೋಗವನ್ನು ವಿಶ್ವ ಕನ್ನಡ ಸಮ್ಮೇಳನ ನಡೆದ ನಂತರ ನಿರ್ಧರಿಸಬಹುದಾಗಿದೆ ಮತ್ತು ತಾತ್ಕಾಲಿಕವಾಗಿ ದಸರಾ ಮತ್ತು ಇತರ ಸಮಾರಂಭಗಳಲ್ಲಿ ಅತಿಥಿಗೃಹಗಳು ಉಪಯೋಗಿಸಲ್ಪಡುತ್ತಿವೆ. ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಅಂದಾಜು ಮಾಡಿರುವ ವೆಚ್ಚ ೧೯೮೫ ರಲ್ಲಿ ೬ ಕೋಟಿ ರೂಪಾಯಿಗಳು ಆಗಿದೆ. ಇದುವರೆಗೂ ಖರ್ಚಾಗಿರತಕ್ಕಂತಹ ಹಣ ೧ ಕೋಟಿ ೩೨ ಲಕ್ಷ ರೂಪಾಯಿಗಳು ಎಂದು ನಿಗದಿ ಮಾಡಲಾಗಿದೆ.

ಧಾರವಾಡದಲ್ಲಿ ಹಾಲು ಸಂಗ್ರಹಣೆ ಮತ್ತು ವಿತರಣೆಮಾಡುವುದು

ಶ್ರೀ ಆರ್. ಎಂ. ಪಾಟೀಲ್.—ಸನ್ಮಾನ್ಯ ಸಭಾಧ್ಯಕ್ಷರೆ, ಈಗ ಬೇಸಿಗೆಯಲ್ಲಿ ಹಾಲಿನ ಕೊರತೆ ಇರುವುದರಿಂದ ನಾನು ಸರ್ಕಾರದ ಗಮನಕ್ಕೆ ಕೆಲವು ವಿಷಯಗಳನ್ನು ತರಬಯಸುತ್ತೇನೆ. ಧಾರವಾಡ ದಲ್ಲಿನ ಹಾಲು ಉತ್ಪಾದನಾ ಘಟಕದಲ್ಲಿ ಪ್ರತಿದಿನ ಯಾವ ಯಾವ ಕ್ರಮಗಳಿಂದ ಹಾಲು ಸಂಗ್ರಹಣೆ ಆಗುತ್ತಿದೆ? ಯಾವ ದರದಲ್ಲಿ ಹಾಲನ್ನು ಖರೀದಿ ಮಾಡುತ್ತಿದ್ದಾರೆ? ಮತ್ತು ಯಾವ ದರದಲ್ಲಿ ಹಾಲನ್ನು ಸರಬರಾಜು ಮಾಡುತ್ತಿದ್ದಾರೆ ! ಎಷ್ಟು ಹಾಲು ಸಂಗ್ರಹಣೆ ಆಗುತ್ತಿದೆ.? ಹಾಲಿನ ಕೊರತೆಯನ್ನು ನೀಗಿಸಲು ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ ? ಇವತ್ತು ಘಟಪ್ರಭಾ ಮತ್ತು ಕೃಷ್ಣಾ ನಡುವೆ ಇರತಕ್ಕ ಪ್ರದೇಶಗಳಲ್ಲಿ ಬೇಸಿಗೆ ಕಾಲದಲ್ಲಿ ಹೆಚ್ಚು ಹಾಲು ಉತ್ಪಾದನೆ ಆಗುತ್ತಿದೆ. ಆ ಹಾಲಿಗೆ ಪೂರ್ತಿ ಮಹಾರಾಷ್ಟ್ರಕ್ಕೆ ಹೋಗುತ್ತಿದೆಯೇ ? ಈ ಬಗ್ಗೆ ಸಂಪೂರ್ಣ ವಿವರಣೆಯನ್ನು ಮಾನ್ಯ ಸಚಿವರು ತಿಳಿಸುತ್ತಾರೆಯೇ ?

ಶ್ರೀ ಎ. ಲಕ್ಷ್ಮಿಸಾಗರ್ (ಮಾನ್ಯ ನಗರಾಭಿವೃದ್ಧಿ ಕಾನೂನು ಮತ್ತು ಸಂಸದೀಯ ವ್ಯವಹಾರ ಖಾತೆಯ ಸಚಿವರು).–

ಅಧ್ಯಕ್ಷರೆ, ಮಾನ್ಯ ಸದಸ್ಯರು ನಾಲ್ಕಾರು ಪ್ರಶ್ನೆಗಳನ್ನು ಹಾಕಿದ್ದಾರೆ. ತಕ್ಷಣ ನನ್ನ ಹತ್ತಿರ ಇವುಗಳಿಗೆ ಉತ್ತರ ಇಲ್ಲ. ಉತ್ತರ ತರಿಸಿ ಕೊಡುತ್ತೇನೆ.

ಪ್ರಕಟಣೆ

ಅಧ್ಯಕ್ಷರು.—ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ನನಗೆ ತಲುಪಿದೆ

ಕರ್ನಾಟಕ ವಿಧಾನ ಸಭೆಯಲ್ಲಿ ಅಂಗೀಕಾರವಾದ ೧೯೮೫ ನೇ ಇಸವಿಯ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲಿನ ತೆರಿಗೆ) ವಿಧೇಯಕವನ್ನು ದಿನಾಂಕ ೧೯ನೇ ಏಪ್ರಿಲ್ ೧೯೮೫ ರಂದು ಕರ್ನಾಟಕ ವಿಧಾನ ಪರಿಷತ್ತು ತಿರಸ್ಕರಿಸಬೇಕೆಂದು ಶಿಫಾರಸ್ಸು ಮಾಡಿತು.